ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸ್ವಲ್ಪ ಕುಳಿತುಕೊಂಡರೆ ನಾನು ಹೇಳುತ್ತೇನೆ. ನನ್ನ ಪ್ರಾರ್ಥನೆ ತಮ್ಮಲ್ಲಿ ಏನೆಂದರೆ ಕುಡಿಯುವ ನೀರಿಗೆ ಬೋರ್‌ವೆಲ್‌ಗಳನ್ನು ಆಳಪಡಿಸಲಿಕ್ಕೆ ಮತ್ತೆ ಹೊಸ ಬೋರ್‌ವೆಲ್‌ಗಳು ಎಲ್ಲಿ ಸಾಧ್ಯವೇ ಇಲ್ಲವೋ ಅಥವಾ ನೀರು ಸಿಗುವುದೇ ಇಲ್ಲವೋ, ಟೋಟಲಿ ನೀರು ಡ್ರೈ ಆಫ್ ಆಗಿದೆ ಬೇರೆ ಸೋರ್ಸ್ ಇಲ್ಲ ಎನ್ನುವ ಕಡೆ ದಯಮಾಡಿ ಬೇಕಾಗಿರುವ ಹಣ ಬಿಡುಗಡೆ ಮಾಡಿ ಎಂದಷ್ಟೇ ನಾನು ತಮ್ಮನ್ನು ಕೇಳಿಕೊಳ್ಳುವುದು. ಹಣ ಇದೆ ಹಣ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಹಣ ಕೊಡುತ್ತಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಿ ಯಾವುದೇ ವಿಧವಾದ ಸೋರ್ಸ್ ಇಲ್ಲ. ಈಗಾಗಲೇ ತಮಗೆ ಗೊತ್ತಿದೆ ಟ್ರಾನ್ಸ್‌ಫೋರ್ಟ್ ಮಾಡತಕ್ಕಂಥಾದ್ದು ಕೆಲವು ಕಡೆ ನಿಂತುಹೋಗಿದೆ. ಟ್ರಾನ್ಸ್‌ಫೋರ್ಟ್ ಮಾಡಲು ಹಣ ಬೇಕಾದರೂ ನಾವು ಕೊಡುತ್ತೇವೆ. ಈ ರಿಪೇರಿಗಾಗಲಿ ಅಥವಾ ಅಲ್ಲಿ ಯಾವುದೇ ಮೂಲದಿಂದ ನೀರು ಇರಲಿಲ್ಲವೆಂದರೂ ಕೂಡ ಹೊಸ ಬೋರ್‌ವೆಲ್ ಹಾಕುವುದಕ್ಕೂ ಕೂಡ ನಾವು ಆದೇಶ ಕೊಟ್ಟಿದ್ದೇವೆ. ಕೊಡುತ್ತೇವೆ. ಅದಕ್ಕೆ ವಿಶೇಷವಾದ ಹಣವನ್ನು ಸಹ ನಾವು ಬಿಡುಗಡೆ ಮಾಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಹೇಳುತ್ತೇವೆ. ಕೆಲವು ಕಡೆ ಹಣ ಇದೆ. ತಾವು ಇಲ್ಲ ಎಂದು ಹೇಳುತ್ತಿದ್ದೀರಿ. ನಾಳೆ ಅಥವಾ ನಾಳಿದ್ದು ಇದರ ಬಗ್ಗೆ ರಿವ್ಯೂ ಮಾಡಿ ಎಲ್ಲೆಲ್ಲಿ ಹಣ ಇಲ್ಲ ಅಲ್ಲಿ ಬಿಡುಗಡೆ ಮಾಡುತ್ತೇವೆ. ಅಥವಾ ಹಣ ಇದ್ದರೂ ಕೂಡ ಅವರು ಏಕೆ ಮಾಡಲಿಲ್ಲ ಎನ್ನುವುದಕ್ಕೆ ಸಮಜಾಯಿಷಿ ಕೊಡಬೇಕಾಗುತ್ತದೆ. ಅದಕ್ಕೆ ಹಣ ಇಲ್ಲ ಎನ್ನತಕ್ಕಂಥಾದ್ದು ಇಲ್ಲ. ಏಪ್ರಿಲ್ ತಿಂಗಳಲ್ಲಿ 13 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಮೇ ತಿಂಗಳಲ್ಲಿ 10 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಜೂನ್ ತಿಂಗಳಲ್ಲಿ 19 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಇದು ಬರೇ ಕುಡಿಯುವ ನೀರಿಗೋಸ್ಕರವೇ ಮಾಡಿದ್ದೇವೆ. ಆದರೂ ಕೂಡ ಕೆಲವು ಕಡೆ ಕೊರತೆ ಇದೆ ಎನ್ನುವ ಮಾತನ್ನು ಹೇಳಿದ್ದೀರಿ. ನಾನು ಖಂಡಿತವಾಗಿಯೂ ರಿವ್ಯೂ ಮಾಡಿ ಅಂತಹ ಕಡೆ ಕೂಡ ಹಣ ಬಿಡುಗಡೆ ಮಾಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿದುದ್ದು ಇವತ್ತು ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ನಿಭಾಯಿಸಬೇಕು; ಈ ಬರಗಾಲ ಕಾಮಗಾರಿಗಳು ಎಲ್ಲಾ ಕಡೆ ನಿಂತು ಹೋಗಿವೆ. ಅದನ್ನು ನಿಭಾಯಿಸುವುದಕ್ಕೂ ರಾಜ್ಯ ಸರ್ಕಾರಕ್ಕೆ ಆಗುತ್ತಿಲ್ಲ. ಕೇಂದ್ರ ಸರ್ಕಾರದಿಂದ ಬಂದಾಗ ನಾವು ಮಾಡುತ್ತೇವೆ ಎನ್ನತಕ್ಕಂಥ ಒಂದು ಧೋರಣೆ ಏನು ಇದೆಯಲ್ಲ ಇದನ್ನು ನಾನು ಖಂಡಿಸುತ್ತೇನೆ. ಈ ಧೋರಣೆಯನ್ನು ನಾನು ಖಂಡಿಸುತ್ತೇನೆ. ತಕ್ಷಣವೇ ಕೆಲಸ ಪ್ರಾರಂಭ ಮಾಡಬೇಕಾಗಿತ್ತು. ಇವತ್ತು ಸರ್ಕಾರ ಸರಿಯಾದ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಕೊಡಲಿಲ್ಲ. ರಾಜ್ಯ ಸರ್ಕಾರ ಸರಿಯಾಗಿ ಸ್ಪಂದನ ಮಾಡುತ್ತಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಬರಪರಿಹಾರ ಕಾಮಗಾರಿಗಳು ಆಗುತ್ತಿಲ್ಲ. ಈ ಧೋರಣೆಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಪ್ರತಿಪಕ್ಷದ ನಾಯಕರೊಂದಿಗೆ ಮಾನ್ಯ ಬಿ ಜೆ ಪಿ ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ರಾಜಕೀಯ.

ಗೊಂದಲ

ಶ್ರೀ ಆರ್.ಎ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಕೇಂದ್ರ ಸರ್ಕಾರ ಏನು ಮಾಡಿದೆ ಎಂದು ಹೇಳಲಿ.